ಆಗುತ್ತಿರಲಿಲ್ಲ. ಅಂಪೈರ್ ಹತ್ತಿರ ತಕರಾರು ಎತ್ತಿದರೂ ಉಪಯೋಗವಾಗಲಿಲ್ಲ.

ಆ ಸಲದ ಅಂತರ ವಿಶ್ವವಿದ್ಯಾಲಯದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಅಜಿತ್ ಹಿಡಿದ ಕ್ಯಾಚುಗಳ ಸಂಖ್ಯೆ ಹೊಸ ದಾಖಲೆಯನ್ನೇ ಬರೆಯಿತು.

ಸಹಜವಾಗಿಯೇ ಅವನು 19 ವರ್ಷಕ್ಕಿಂತ ಕೆಳಗಿನವರ ತಂಡಕ್ಕೆ ಆಯ್ಕೆಯಾದ. ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಅವನು ಹಿಡಿದ ಕ್ಯಾಚ್‌ಗಳು ವಿವಾದವನ್ನೇ ಎಬ್ಬಿಸಿದವು. ಎಷ್ಟು ಬಾರಿ ರಿ–ಪ್ಲೇ ಮಾಡಿದರೂ ಸ್ಲೋ ಮೋಷನ್‌ನಲ್ಲಿ ನೋಡಿದರೂ ಅವನ ಕೈ ಚೆಂಡನ್ನು ಹಿಡಿಯುವುದು ಸ್ಪಷ್ಟವಾಗಿ ಕಾಣುತ್ತಿತ್ತು. ಔಟ್ ಕೊಡದಿರಲು ಮೂರನೇ ಅಂಪೈರ್‌ಗೆ ಕಾರಣವೇ ಇರುತ್ತಿರಲಿಲ್ಲ.

ಅವನು 19 ವರ್ಷ ದಾಟಿ ಭಾರತದ ಹಿರಿಯರ ತಂಡಕ್ಕೆ ಆಯ್ಕೆಯಾದಾಗ ಕನ್ನಡ ಪತ್ರಿಕೆಗಳಲ್ಲಿ ಪೂರ್ಣ ಪುಟದ ಜಾಹೀರಾತು ನೀಡಿ, 'ಚಾಚು ಕೈ ವೀರ ಅಜಿತನಿಗೆ ಅಭಿನಂದನೆಗಳು' ಎಂದು ಅಭಿಮಾನಿಗಳು ಶುಭಕೋರಿದರು. ಮೊದಲ ಸರಣಿಯೇ ಆಸ್ಟ್ರೇಲಿಯಾ ತಂಡದ ವಿರುದ್ಧ ಇತ್ತು. ಮೊದಲ ಏಕದಿನ ಪಂದ್ಯದಲ್ಲಿ ಮೊದಲ ಸರದಿಯಲ್ಲಿ 212 ರನ್ ಮಾಡುವಷ್ಟರಲ್ಲಿ ಆಲ್‌ಔಟ್ ಆಗಿತ್ತು. ಆಸ್ಟ್ರೇಲಿಯಾ ತಂಡ ಆಗಲೇ ಗೆಲುವಿನ ಅಲೆಯಮೇಲೆ ತೇಲುತ್ತಿತ್ತು. ಆದರೆ, ತನ್ನ ಸರದಿಯನ್ನು ಆರಂಭಿಸುತ್ತಿದ್ದಂತೆಯೇ ವಿಕೆಟ್‌ಗಳು ಇಸ್ಪೀಟ್ ಎಲೆಗಳಂತೆ ಉರುಳಿದವು. ಆಯತ ಸ್ಥಾನದಲ್ಲಿ ನಿಂತಿದ್ದ ಅಜಿತ್ 5 ಕ್ಯಾಚುಗಳನ್ನು ಹಿಡಿದಿದ್ದ. ಕೊನೆಯ ಬಾಲಿಗೆ ಬಂದಾಗ ಆಸ್ಟ್ರೇಲಿಯಾ 207 ರನ್ ಮಾಡಿದ್ದು, ಗೆಲ್ಲಲು ಒಂದು ಸಿಕ್ಸರ್ ಬೇಕಾಗಿತ್ತು. ಭಾರತ ತಂಡದ ನಾಯಕ ಬೌಲರ್‌ಗೆ ಯಾರ್ಕರ್ ಹಾಕುವಂತೆ ಸೂಚನೆ ಕೊಟ್ಟ. ಆದರೆ, ಬ್ಯಾಟ್ಸ್‌ಮನ್ ಎರಡು ಹೆಜ್ಜೆ ಮುಂದಿಟ್ಟು ಸಿಕ್ಸರ್ ಎತ್ತೇಬಿಟ್ಟ. ಆಸ್ಟ್ರೇಲಿಯಾ ತಂಡ ಗೆದ್ದೇಬಿಟ್ಟಿತು ಎಂದು ಪ್ರೇಕ್ಷಕರೆಲ್ಲ ಎದ್ದುನಿಂತು ಜಯಘೋಷ ಮಾಡಿದರು. ಚೆಂಡು ಆಕಾಶದಲ್ಲಿ ಮೇಲಕ್ಕೆ ಸಾಗಿ, ಬೌಂಡರಿ ದಾಟಲು ಅಜಿತನಿದ್ದ ದಿಕ್ಕಿನಲ್ಲಿ ಸಾಗುತ್ತಿತ್ತು. ಅಜಿತನ ತಲೆಯ ಮೇಲ್ಭಾಗದಲ್ಲಿ, ಸುಮಾರು 10 ಅಡಿ ಎತ್ತರದಲ್ಲಿ ಚೆಂಡು ನುಗ್ಗುತ್ತಿತ್ತು. ಅಜಿತ್ ಬಲಗೈ ಚಾಚಿ ಗಬಕ್ಕನೆ ಚೆಂಡು ಹಿಡಿದುಬಿಟ್ಟ. ಪ್ರೇಕ್ಷಕರು ಸ್ತಂಭೀಭೂತರಾದರು. ಒಂದೇ ಕ್ಷಣದ ಆಟದ ಫಲಿತಾಂಶ ತಿರುವು ಮುರುವಾಗಿತ್ತು. ಭಾರತ ಗೆದ್ದಿತು. ಭಾರತದ ಪಾಳಯದಲ್ಲಿ ಸಂತೋಷ ಮುಗಿಲು ಮುಟ್ಟಿತು. ಆದರೆ, ಆಸ್ಟ್ರೇಲಿಯಾ ಸೋಲನ್ನು ಸುಲಭವಾಗಿ ಒಪ್ಪಿಕೊಳ್ಳಲಿಲ್ಲ. ಮರು ಪರಿಶೀಲನೆಯ ಮನವಿ ಸಲ್ಲಿಸಿತು. ಮೂರನೆಯ ಅಂಪೈರ್ ಕೊನೆಯ ದೃಶ್ಯವನ್ನು ಮತ್ತೆಮತ್ತೆ ಪರಿಶೀಲಿಸಿ ಔಟ್ ಕೊಟ್ಟ.

ಮರುದಿನ ಪತ್ರಿಕೆಯಲ್ಲಿ ಮುಖಪುಟದ ಶೀರ್ಷಿಕೆ: 'ಆಸ್ಟ್ರೇಲಿಯಾಕ್ಕೆ ಸೋಲುಣಿಸಿದ ಉದ್ದಕೈ ತರುಣ' ಎಂದಿತ್ತು. ಕೆಲವು ಪತ್ರಿಕೆಗಳು ಅಜಿತನ ಚಿತ್ರವನ್ನು ಕಾರ್ಟೂನ್ ರೂಪದಲ್ಲಿ ತೋರಿಸಿ ಅವನ ಬಲಗೈಯನ್ನು 'ಔಟ್ ಆಫ್ ಪ್ರಪೋರ್ಷನ್'(ಪ್ರಮಾಣಕ್ಕೆಮೀರಿದ ಅಳತೆ)ನಲ್ಲಿ ಚಿತ್ರಿಸಿದ್ದವು. ಆ ಬಾರಿಯ ಎಲ್ಲ ಪಂದ್ಯಗಳಲ್ಲೂ ಹೀಗೆಯೇ ಆಯಿತು. ಏಕದಿನ ಪಂದ್ಯ, 20–20, ಟೆಸ್ಟ್ ಮ್ಯಾಚ್ ಎಲ್ಲದರಲ್ಲೂ ಭಾರತ ಆಸ್ಟ್ರೇಲಿಯಾವನ್ನು ಕ್ಲೀನ್ ಸ್ವೀಪ್ ಮಾಡಿತು (ಗುಡಿಸಿ ಹಾಕಿತು). ಆಸ್ಟ್ರೇಲಿಯಾ ಐಸಿಸಿಗೆ ದೂರು ಸಲ್ಲಿಸಿತು. ಅದು ಒಂದು ಪರಿಶೀಲನಾ ಸಮಿತಿಯನ್ನು ರಚಿಸಿ ಈ ಸಮಸ್ಯೆಯನ್ನು ಅಧ್ಯಯನ ಮಾಡಿ ವರದಿ ಸಲ್ಲಿಸಲು ತಿಳಿಸಿತು. ಸಮಿತಿಯು ಅಜಿತನು ಚೆಂಡನ್ನು ಹಿಡಿದ ಎಲ್ಲ ದೃಶ್ಯಗಳನ್ನು ವಿವರವಾಗಿ ಅಧ್ಯಯನ ಮಾಡಿ, ಅದು ಒಂದು ವಿಶಿಷ್ಟ ಶೈಲಿಯೇ ಹೊರತು, ನಿಯಮ ಬಾಹಿರವಲ್ಲ ಎಂದು ತೀರ್ಪು ನೀಡಿತು.

ಆಗ ಏಳನೇ ತರಗತಿಯಲ್ಲಿ ಕಿವಿ ಹಿಂಡಿಸಿಕೊಂಡಿದ್ದ ಹುಡುಗನಿಗೆ ಅದು ಕೊನೆಯ ಬೆಂಚಿನಲ್ಲಿ ಕುಳಿತಿದ್ದ ಅಜಿತನದೇ ಕೈವಾಡ ಎಂದು ಅರ್ಥವಾಯಿತು.